ಜಯದೇವ ಕುಲಕರ್ಣಿಯವರೂ ಧಾವಿಸಿಬಂದು ಜಗಳ ಬಿಡಿಸಿ ಎಲ್ಲರನ್ನು ಅವರವರ ಬರಾಕಿನಲ್ಲಿ ಹಾಕಿ ಶಾಂತತಾ ಸ್ಥಾಪಿಸಿದರು. ಅಂದಿನಿಂದ ಹೊರರು ನಮ್ಮ ರಾಜಬಂದಿ ಗಳ ಗೋಜಿಗೆ ಹೋಗಲಿಲ್ಲ,

ವಿಸಾಪೂರ ಜೇಲಿನಲ್ಲಿಯೂ ಅಭ್ಯಾಸ ಮಂಡಳ, ಹಿಂದಿವರ್ಗ, ನೂಲುವದು ಇತ್ಯಾದಿ ಚಟುವಟಿಕೆಗಳು ನಡೆಯುತ್ತಿದ್ದವು. ಆದರೆ ಬಹಳಷ್ಟು ರಾಜಬಂದಿಗಳು ಅವುಗಳಿಂದ ಅಲಿಪ್ತರಾಗಿಯೇ ಉಳಿಯುತ್ತಿದ್ದರು.

ರಾಜ ಬಂದಿಗಳಿಗೆ ಸಹಾನುಭೂತಿ ತೋರಿಸಿದ್ದಕ್ಕಾಗಿ ಬ್ರಿಟಿಶ ಆಡಳಿತದಲ್ಲಿ ಶ್ರೀ ನಿಕೋಲಸ ಜೇಲರರಿಗೆ ಯೋಗ್ಯ ಬಡತಿ ಸಿಗಲಿಲ್ಲ. ಮುಂದೆ ಕಾಂಗ್ರೆಸ ಮಂತ್ರಿ ಮಂಡಳ ಬಂದನಂತರ ಅವರಿಗೆ ತಕ್ಕ ಬಡತಿ ಕೊಡಬೇಕೆಂದು ಶ್ರೀ ಅಪ್ಪಣ್ಣಗೌಡರು ಪ್ರಯತ್ನಿಸಿದರು. " ನಿಮಗೆ ಅವರು ಜೇಲಿನಲ್ಲಿ ಸವಲತ್ತು ಕೊಟ್ಟಿದ್ದರೆಂದು ನೀವು ಅವರಬಗ್ಗೆ ಹೇಳಲು ಬಂದಿದ್ದೀರಿ, ಅದೇನೂ ಆಗದು " ಎಂದು ಅವರಿಗೆ ಕಾಂಗ್ರೆಸ ಮಂತ್ರಿಗಳಿಂದ ಉತ್ತರ ದೊರೆಯಿತು. ಸ್ವರಾಜ್ಯದ ಲಾಭ ಮಂತ್ರಿಗಳಿಗೆ ಸಿಕ್ಕಿತು. ಬ್ರಿಟಿಶ ಸರಕಾರದ ಬಾಲಬಡೆಯುವವರಿಗೆ ಸಿಕ್ಕಿತು. ದುರ್ಜನ ಪೋಲೀಸ ಅಧಿಕಾರಿ ಗಳಿಗೆ ಸಿಕ್ಕಿತು. ಕಷ್ಟ ಸೋಸಿದವರು ಕಾರ್ಪಣ್ಯಕ್ಕೀಡಾದರು ! ಅವರಿಗೆ ಸಹಾನು ಭೂತಿ ತೋರಿಸಿದ ಅಧಿಕಾರಿಗಳು ಪಶ್ಚಾತ್ತಾಪ ಪಟ್ಟರು !

ಹಿಂಡಲಗಾ ಜೇಲಿನಲ್ಲಿ ಕಾಲರಾ !

ಹಿಂಡಲಗಾ ಜೇಲಿನಲ್ಲಿ ಹೆಚ್ಚಿಗೆ ಹೆಚ್ಚಿಂದರೆ ೯೦೦ ರಿಂದ ೧೦೦೦ ಕೈದಿಗಳನ್ನು ಇಡಲು ಸ್ಥಳವು ಹಾಗು ಅನುಕೂಲತೆಗಳು ಇವೆ. ಆದರೆ ೧೯೪೨ ರ ಆಂದೋಲನ ದಲ್ಲಿ ಪೋಲೀಸರು ಸಂಶಯದಿಂದ ಸಿಕ್ಕವರನ್ನು ಸಿಕ್ಕಾಪಟ್ಟೆ ಬಂಧಿಸಿದರಲ್ಲದೆ ಅವರ ಸಂಬಂಧಿಕರನ್ನು ಎಳೆದುತಂದು ಜೇಲಿಗೆ ಸೇರಿಸಿದರು. ಜೇಲಿನಲ್ಲಿ ಕೈದಿಗಳ ಸಂಖ್ಯೆ ದಿನ ದಿನಕ್ಕೆ ಬೆಳೆದು ಡಿಸೆಂಬರ ೧ ಕ್ಕೆ ಅದು ೨೩೦೦ ಕ್ಕೆ ಏರಿತು. ಡಿಸೆಂಬರ ೧೦ ಕ್ಕೆ ಕೈದಿಗಳ ಸಂಖ್ಯೆ ೨೬೦೦ ಇದ್ದಿತು. ಜೇಲಿನ ವ್ಯವಸ್ಥೆಗಾಗಿ ಇದ್ದ ಸಿಬ್ಬಂದಿಯ ಸಂಖ್ಯೆ ಏರಿಸಲು ಸರಕಾರ ಸಿದ್ದವಿರಲಿಲ್ಲ. ಇದ್ದ ನವಕರರಿಂದ ಕೆಲಸ ಸಾಗಿಸುದು, ಸ್ವಚ್ಛತೆ ಹಾಗು ಆರೋಗ್ಯ ಕಾಪಾಡುವದು ಅಶಕ್ಯವಾಯಿತು. ಆಹಾರದಲ್ಲಿ ಏನೂ ಸತ್ವ ಇರಲಿಲ್ಲ. ರೊಟ್ಟಿಯಲ್ಲಿ ಉಸುಬು ಮತ್ತು ಧೂಳಿಕಣಗಳ ಅಂಶ ಬೆಳೆಯಿತು. ಸಂಜೆಗೆ ಕೊಡುವ ಹಸರಾಣಿ ಪಲ್ಲೆಯಲ್ಲಿ ಒಳ್ಳೆ ಪಲ್ಲೆಯ ತುಣುಕು ತೊಪ್ಪಲಕೂಡ ಇರಲಿಲ್ಲ.

ಬಹಳ ಉತ್ತಮ ಪಲ್ಲೆಯೆಂದರೆ ಗೋಳಿ ತೊಪ್ಪಲ, ಪಪ್ಪಯಿಕಾಯಿ ಹಾಗು ಅದರ ತೊಪ್ಪಲ. ಈ ಪಲ್ಲೆಯಲ್ಲಿ ಮಳೆಯ ಹುಳ ಜಟ್ಟಿ ಮುಂತಾದವು ಸಾಕಷ್ಟು ಇರುತ್ತಿದ್ದವು. ಮಧ್ಯಾನ್ಹ ಕೊಡುವ ಬೇಳೆಯಲ್ಲಿಯೂ ಹುಳಹುಪ್ಪಡಿ ಇರುತ್ತಿದ್ದವು. ಕುಡಿಯುವ ನೀರಿನ ಕೊರತೆಯೂ ಉಂಟಾಯಿತು. ಕಕ್ಕಸಗಳು ಯಾವಾಗಲೂ ತುಂಬಿಕೊಂಡೇ ಇರುತ್ತಿದ್ದುದರಿಂದ ದುರ್ಗಂಧ ಹರಡಿ ಜೀಲಜೀವನ ಅಸಹ್ಯವಾಯಿತು.

ಒಂದು ಸೆಪರೇಟ ಕೋಣೆಯಲ್ಲಿ ೧ ರಿಂದ ೩ ಜನರನ್ನು ಇಡುವಷ್ಟು ಜಾಗೆ ಇತ್ತು. ಆದರೆ ಆದರಲ್ಲಿ ೭ ರಿಂದ ೯ ರ ವರೆಗೆ ಕೈದಿಗಳನ್ನು ಹಾಕಿದ್ದರು. ರಾತ್ರಿಯಲ್ಲಿ ಮೂತ್ರ ವಿಸರ್ಜನೆ ಮಾಡಬೇಕಾದರೆ ಆ ಕೋಣೆಯ ಒಂದು ಮೂಲೆಯಲ್ಲಿಟ್ಟ ಒಂದು ಬಾನಿಯಲ್ಲಿ ಮಾಡಬೇಕು. ಮಲವಿಸರ್ಜನೆ ಮಾಡುವ ಪ್ರಸಂಗ ಬಂದರೆ ಆ ವಿಧಿಯನ್ನೂ ಅದೇ ಬಾನಿಯಲ್ಲಿ ಪೂರೈಸಿ ಕೊಳ್ಳಬೇಕಾಗುತಿತ್ತು. ಇಂಥ ದಾರುಣ ಪರಿಸ್ಥಿತಿಯಲ್ಲಿ ಊಟ ಕೂಡ ಸಮಯಾನುಸಾರ ಬಾರದಾದಾಗ ರಾಜಕೀಯ ಕೈದಿಗಳು ಜೈಜೈಕಾರ ಮಾಡತೊಡಗಿದರು. ಜೈಕಾರ ಹಾಕುವವರಿಗೆ ದಂಡಾಬೇಡಿ ಹಾಕಿ ಅವರನ್ನು ಚಾಬೂಕಿನಿಂದ ಹೊಡೆಯಲಾರಂಭಿಸಿದರು. ರಾಜ ಬಂದಿಗಳ ಮುಖಂಡರನ್ನು ಕತ್ತಲು ಕೋಣೆಯಯಲ್ಲಿ ಹಾಕಿದರು. ಜೇಲ ಅಧಿಕಾರಿಗಳನ್ನು ಕಂಡು ಮಾತಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಬೇನೆಯಿಂದ ಬಳಲುವವರಿಗೆ ವೈದ್ಯಕೀಯ ಉಪಚಾರ ಸಕಾಲಕ್ಕೆ ಆಗದಾಯಿತು. ಜೇಲಿನ ಆಸ್ಪತ್ರೆಯಲ್ಲಿ ಒಬ್ಬರೇ ಡಾಕ್ಟರರು. ರುಗ್ಣ ಕೈದಿಗಳನ್ನು ಪರೀಕ್ಷಿಸಿ ಉಪಚಾರ ಮಾಡುವದು ಅವರಿಗೆ ಅಶಕ್ಯವಾಯಿತು. ಸಾಕಷ್ಟು ಔಷಧಗಳೂ ಇರಲಿಲ್ಲ. ಕೈದಿಗಳ ಪ್ರಕೃತಿ ದಿನದಿನಕ್ಕೆ ಕೆಡಹತ್ತಿತು. ಅಂಥದರಲ್ಲಿ ಡಿಸೆಂಬರ ೧೦ ನೇ ದಿನಾಂಕದ ಸುಮಾರಿಗೆ ಜೇಲಿನಲ್ಲಿ ಕಾಲರಾದಂಥ ವಿಚಿತ್ರ ಬೇನೆ ಹಬ್ಬಿತು ! ಕೆಲವು ಕೈದಿಗಳ ಆಯುಷ್ಯ ತುಂಬಿಬಂತು ! ಆ ರೋಗಕ್ಕೆ ಕೆಲವರು ಅಮಾಂತ್ರಶೋಥ (ಗ್ಯಾಸ್ಟ್ರೊ ಎಂಟ್ರಾಯಟಿಸ್) ಅಂದರೆ ಅನ್ನ ಕೆಲವರು ಅನ್ನ ವಿಷಬಾಧೆ (ಫುಡ್ ಪಾಯಝುನಿಂಗ) ಎಂದಂದರು. ರೋಗದ ಹೆಸರು ಏನೆ ಇದ್ದರೂ ಆದರಿಂದ ಅಸಹಾಯ ಕೈದಿಗಳು ಸಾಯ ಹತ್ತಿದರು. ಬೇನೆ ಬಿದ್ದವರನ್ನು ಜೇಲಿನ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಬಿಸ್ತ್‌ದ ಹೊರತು ಬೇರೆ ಔಷಧವಿರಲಿಲ್ಲ. ಒಂದೆರಡು ದಿನಗಳಲ್ಲಿ ಆಸ್ಪತ್ರೆಗೆ ಸಾಗಿಸಿದ ಕೈದಿಗಳಲ್ಲಿ ಕೆಲವು ಕ್ರಮಿನಲ್ ಕೈದಿಗಳೂ ಇಬ್ಬರು ರಾಜಕೀಯ ಕೈದಿಗಳೂ ಆ ಭಯಾನಕ ರೋಗಕ್ಕೆ ಬಲಿಯಾದರು.

"ಜಾನ್ ಧೋಕೆಮೆ, ಜೇಲ ಖಾಲಿ ಕರೊ !"

ಪರಿಸ್ಥಿತಿಯ ಗಾಂಭೀರ್ಯವನ್ನರಿತು ಎಲ್ಲ ರಾಜಕೀಯ ಕೈದಿಗಳು ಒತ್ತಟ್ಟಿಗೆ ಸೇರಿ ಸಂಘಟಿತ ಪ್ರತಿಭಟನೆ ಮಾಡಬೇಕೆಂದು ಗೊತ್ತಾಯಿತು. ನಮ್ಮ ಜಿಲ್ಹೆಯ ಮುಖಂಡರು ಆಗ ೧ ನೇ ವರ್ಗದ ಸ್ಥಾನಬದ್ಧರಾಗಿದ್ದರು. ಅವರಲ್ಲಿ ಶ್ರೀ. ಗಂಗಾಧರ

ರಾವ ದೇಶವಾಂಡೆ, ದ. ಲ. ಧ್ಯಾಪಕ, ವೆಂಕರಡ್ಡಿ ಹೂಲಿ, ಬಸಪ್ಪ ಆರಗಾವಿ, ಶಂಕರ ರಾವ ಕಾಮತ, ಅಣ್ಣಾಪ್ಪಾ ಪದಕಿ, ಷಣ್ಮುಖಪ್ಪಾ ಅಂಗಡಿ, ಧಾರವಾಡ ಜಿಲ್ಲೆಯ ಡಾ. ಹರಡೀಕರ, ಮೊದಲಾದವರಿದ್ದರು. ೨ ನೇ ವರ್ಗದ ನ್ಹಾನ ಬದ್ಧರಲ್ಲಿ ವೆಂಕಟೇಶ ಮಾಗಡಿ, ಬೆಳಗಾವಿಯ ಆರ್. ಎಚ್. ಕುಲಕರ್ಣಿ, ರಾಘವೇಂದ್ರ ಮುನೋಳಿ ಮೊದ ಲಾದವರು ಇದ್ದರು. ಇವರೆಲ್ಲ ಜೇಲಿನಲ್ಲಿಯ ತಾವಿದ್ದ ಭಾಗದಲ್ಲಿ ಸಭೆ ಸೇರಿ ಪ್ರತಿ ಭೆಟನೆಯ ಕಾರ್ಯಕ್ರಮವನ್ನು ನಿರ್ಧರಿಸಿದರು. ಅದರಂತೆ ಒಂದು ದಿನ " ಒಳ್ಳೇ ಆಹಾರ, ಸಾಕಷ್ಟು ಸ್ವಚ್ಛತೆ, ಒಳ್ಳೆಯ ವೈದ್ಯಕೀಯ ಉಪಚಾರ ದೊರೆಯುವತನಕ ತಾವು ಕೋಣೆಯಲ್ಲಿ ಹಾಗು ಬರಾಕಿನಲ್ಲಿ ಬಂದಾಗುವದಿಲ್ಲ " ಎಂದು ಎಲ್ಲ ರಾಜ ಕೀಯ ಕೈದಿಗಳು ಒಕ್ಕೊರಲಿನಿಂದ ಘೋಷಿಸಿದರು. ಪ್ರತಿದಿನ ಸಂಜೆಗೆ ಎಲ್ಲ ಕೈದಿಗಳನ್ನು ಕೋಣೆಯಲ್ಲಾಗಲಿ, ಬರಾಕಿನಲ್ಲಾಗಲಿ ಹಾಕಿ ಕೀಲಿ ಜಡಿಯುತ್ತಿದ್ದರು. ಆ ದಿನ ತಾವು ಒಳಗೆ ಹೋಗುವದಿಲ್ಲೆಂದು ಸಾರಿ ಎಲ್ಲರೂ ಜೀವದ ಹಂಗುದೊರೆದು ಅಂಗಳದಲ್ಲಿ ನೆರೆದು ಜೈಜೈಕಾರ ಪ್ರಾರಂಭಿಸಿದರು. " ಜಾನ ಧೋಕೆಮೆ ಹೈ – ಜೇಲ ಖಾಲೀ ಕರೊ" "ಲಾಯಿಫ ಇನ್ ಡೇಂಜರ, ವೆಕೇಟ ದ ಜೇಲ (ಜೀವ ಗಂಡಾಂತರದಲ್ಲಿದೆ–ಜೇಲು ತೆರವು ಮಾಡಿರಿ) " ಇದೇ ಅಂದಿನ ಘೋಷಣೆ ಆಗಿತ್ತು. ನಡುನಡುವೆ "ಮಹಾತ್ಮಾ ಗಾಂಧೀಕಿ ಜೈ'' ಎಂದೂ ಜೈಕಾರ ಹಾಕುತ್ತಿದ್ದರು. ಈ ಗಗನಭೇದಿ ಘೋಷಣೆಗಳನ್ನು ಕೇಳಿ ಜೇಲಧಿಕಾರಿಗಳು ಗಾಬರಿಯಾದರು. ಏನು ಮಾಡಬೇಕೆಂಬುದು ಅವರಿಗೆ ತಿಳಿಯ ದಾಯಿತು. ಕೆಲವು ಸೌಕರ್ಯಗಳೆನ್ನು ಮಾಡಿಕೊಡಲು ಪ್ರಯತ್ನಿಸಿದರು. ಅದು ಸಾಧ್ಯ ವಾಗಲಿಲ್ಲ. ಆಗ ಲ್ಯಾಕ್ಸಟನ್ ಎಂಬವರು ಜೇಲ ಸುಪರಿಂಟೆಂಡಂಟರಿದ್ದು ರಾವೂತ ಎಂಬವರು ಜೇಲರ ಇದ್ದರು. ರಾಜಬಂದಿಗಳು ಒಂದೆಡೆ ಸೇರಿ ಬಂಡೆದ್ದು ದನ್ನು ನೋಡಿ ಅವರಿದ್ದಲ್ಲಿಗೆ ಬರಲು ಸಹ ಈ ಜೇಲಧಿಕಾರಿಗಳಿಗೆ ಧೈರ್ಯವಾಗಲಿಲ್ಲ. ಈ ಚಳು ವಳಿಯ ನೇತೃತ್ವವನ್ನೂ ಒಂದನೇ ವರ್ಗದ ಸ್ಥಾನಬದ್ಧರೇ ವಹಿಸಿದ್ದರು. ಎರಡನೇ ವರ್ಗದವರಲ್ಲಿ ಮುಂದಾಳುಗಳಾರೂ ಇರಲಿಲ್ಲ. ಅವರೆಲ್ಲ ಅನುಯಾಯಿಗಳೇ ಆಗಿ ದ್ದರು.

ಸಶಸ್ತ್ರ ಪೋಲೀಸ ಪಾರ್ಟಿ ಬಂದಿತು!

ರಾಜಬಂದಿಗಳ ಮೇಲಿನ ತಮ್ಮ ಹತೋಟಿ ತಪ್ಪಿದ್ದನ್ನು ಕಂಡು ಜೇಲಧಿಕಾರಿಗಳು ಹೌಹಾರಿ ಪೋಲೀಸ ಪಾರ್ಟಿ ಕರೆಸಿದರು. ಕೈದಿಗಳು ಜೇಲು ಒಡೆದು ಹೋಗಬಹು ದೆಂಬ ಭಯ ಅವರನ್ನು ಆವರಿಸಿತ್ತು. ಜೇಲ ಸುಪರಿಂಟೆಂಡೆಂಟ ಲ್ಯಾಕ್ಸಟನ್, ಪೋಲೀಸ ಸುಪರಿಂಟೆಂಡೆಂಟ ಕಾರ್ನಿಂಗ್ ಹ್ಯಾಮ, ಸಿಟಿ ಮ್ಯಾಜಿಸ್ಟ್ರೇಟ ಮೊದಲಾದ ವರು ಸಶಸ್ತ್ರ ಪೋಲೀಸ ಪಡೆಯೊಂದಿಗೆ ನುಗ್ಗಿ ಬಂದರು. ಆದರೆ ರಾಜಬಂದಿಗಳು ಎಳ್ಳಷ್ಟೂ ಹೆದರದೆ ಅವಿಚಲರಾಗಿ ನಿಂತರು. ಕೆಟ್ಟ ಆಹಾರ ತಿಂದು ಕಾಲರಾದಿಂದ ಇಲಿ ಗಳಂತೆ ಸಾಯುವದಕ್ಕಿಂತ ಗುಂಡಿಗೆ ತುತ್ತಾಗಿ ಹುತಾತ್ಮರಾಗುವದು ಲೇಸೆಂದು ಅವರು ಭಾವಿಸಿದರು. ಸಿಟಿ ಮ್ಯಾಜಿಸ್ಟ್ರೇಟರು ಅವರಿಗೆ "ಒಳಗೆ ಹೋಗಿರಿ. ನಿಮ್ಮ ಕೋಣೆ

ಬರಾಕುಗಳಲ್ಲಿ ಬಂದಾಗಿರಿ" ಎಂದು ಸಾರಿ ಹೇಳಿದರು. ಅದಕ್ಕೆ ಯಾರೂ ಕಿವಿಗೊಡ ಲಿಲ್ಲ. ಪೋಲೀಸರಿಗೆ "ಸಜ್ಜಾಗಿರಿ" ಎಂದು ಮ್ಯಾಜಿಸ್ಟೇಟರು ಹುಕುಂ ಕೊಟ್ಟರು. ಪೋಲೀಸರು ಬಂದೂಕುಗಳಲ್ಲಿ ಕಾಡತೂಸುಗಳನ್ನು ತುಂಬಿ ಗುಂಡು ಹಾರಿಸಲು ಸಜ್ಜಾಗಿ ನಿಂತರು. ಆಗ ಕರ್ನಾಟಕ ಸಿಂಹ ಗಂಗಾಧರರಾವ ದೇಶಪಾಂಡೆಯವರು ಮುಂದೆ ಬಂದು ಎದೆ ತಟ್ಟಿ ನಿಂತು— "ಗುಂಡು ಹಾಕುವದಿದ್ದರೆ ಹಾಕಿರಿ. ನಾವು ಅದಕ್ಕೆ ಸಿದ್ದರಿದ್ದೇವೆ. ಹುಳಗಳಂತೆ ಸಾಯುವದಕ್ಕಿಂತ ಹುಲಿಗಳಂತೆ ಸಾಯುವದು ಲೇಸು! " ಎಂದು ಸಿಂಹನಾದ ಮಾಡಿದರು. ಜೇಲರ ಹಾಗು ಸುಪರಿಂಟೆಂಡೆಂಟರು ಅವಾಕ್ಕಾದರು. ಲ್ಯಾಕ್ಸ್‌ಟನ್ ಸಾಹೇಬರು ಕೈಜೋಡಿಸಿ ರಾಜಬಂದಿಗಳ ಸಹಕಾರ ಯಾಚಿಸಿದರು. ರಾವುತರು ಏನಮ್ಮರಾಗಿ ಮುಂದೆ ಬಂದು— "ಸರಕಾರಕ್ಕೆ ಅರಿಕೆ ಮಾಡಿ ಇನ್ನೆಂಟು ದಿನಗಳಲ್ಲಿ ನಾವು ಎಲ್ಲ ವ್ಯವಸ್ಥೆ ಮಾಡುತ್ತೇವೆ. ಅದುವರೆಗೆ ಹೇಗಾದರೂ ಮಾಡಿ ತಾಳಿರಿ'' ಎಂದು ದೈನ್ಯದಿಂದ ಕೇಳಿಕೊಂಡರು. ಇನ್ನು ಹಗ್ಗ ಹರಿಯುವವರೆಗೆ ಜಗ್ಗುವದು ಜಾಣತನದ್ದಾಗಲಾರದೆಂದು ಬಗೆದು ಹೋರಾಟಗಾರರ ಮುಖಂಡರು ಎಲ್ಲರಿಗೆ ಒಳಗೆ ಹೋಗಲು ಹೇಳಿದರು. ಪೋಲೀಸ ಪಾರ್ಟಿ ಹಿಂದಿರುಗಿತು,

ಇದಾದ ತುಸು ಹೊತ್ತಿ ನಲ್ಲೇ ಜೇಲ ಆಸ್ಪತ್ರೆಗೆ ಸಾಗಿಸಿದ ರಾಜಬಂದಿಗಳಲ್ಲಿ ಕೆಲ ವರು ಮೃತರಾದರೆಂದು ತಿಳಿಯಿತು. ಆಗ ಈ ಬೇನೆಯಿಂದ ಬಳಲುವವರ ಸುಶ್ರೂಷೆ ಮಾಡುವದಕ್ಕಾಗಿ ಸ್ವಯಂಸೇವಕರ ಪಥಕವನ್ನು ಸಂಘಟಿಸುವದರ ಸಲುವಾಗಿ ಡಾ ಹರ್ಡೀಕರರು ಎರಡನೇ ವರ್ಗದ ಎಲ್ಲ ಸ್ಥಾನಬದ್ಧರನ್ನು ಕರೆದು— " ಇದು ಭಯಾನಕ ಸುಂಕರೋಗ ಸಾಯಲು ಸಿದ್ಧರಿದ್ದವರೇ ಈ ಸುಶ್ರೂಷಾಪಥಕದಲ್ಲಿ ಸೇರಿ ರುಗ್ಣರ ಸೇವೆ ಮಾಡಲು ಮುಂದೆ ಬರಬೇಕು '' ಎಂದು ಕೇಳಿಕೊಂಡರು. ತಮ್ಮ ಹೆಂಡರ ಮಕ್ಕಳ ನೆನಪಾಗಿದ್ದರಿಂದಲೋ ಅಥವಾ ತಮ್ಮ ಜೀವಿತಕ್ಕೆ ಗಂಡಾಂತರ ಬಂದೀತೆಂದು ಹೆದರಿಯೋ ಉದ್ದುದ್ದ ಮಾತಾಡುವ ಅನೇಕರು ಹಿಂಜರಿದರು. ಶ್ರೀ. ಆರ್. ಎಚ್. ಕುಲಕರ್ಣಿಯವರಂಥ ಸ್ವಲ್ಪೇ ಅವಿವಾಹಿತ ತರುಣರು ಮುಂದೆ ಬಂದು ಈ ಭೂತ ದಯೆಯ ಕಾರ್ಯ ಕೈಕೊಂಡರು. ೧ ನೇ ವರ್ಗದ ಸ್ಥಾನ ಬದ್ಧರಾದ ಡಾ. ಕಬ್ಬೂರ (ಧಾರವಾಡ) ಅವರು ಜೇಲಧಿಕಾರಿಗಳ ಮನವೊಲಿಸಿ ತಾವೇ ಔಷಧೋಪಚಾರದ ಹೊಣೆಹೊತ್ತು ಜೇಲ ಆಸ್ಪತ್ರೆಯಲ್ಲಿಯೇ ಬಂದು ನಿಂತರು. ಜೇಲ ಅಧಿಕಾರಿಗಳು ನಮ್ಮ ಜನರು ಹೇಳಿದ್ದಕ್ಕೆಲ್ಲ ಒಪ್ಪಿ ಆಹಾರದಲ್ಲಿ ಸುಧಾರಣೆ ಮಾಡಿದರು. ಸ್ವಚ್ಛತೆ, ಶೌಚ ಕೂಪ ಆದಿ ಆರೋಗ್ಯ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿದರು. ಡಾ. ಕಬ್ಬೂರರು ಹೇಳಿದ ಔಷಧಗಳನ್ನೂ ಒದಗಿಸಿದರು. ನಮ್ಮವರ ಕೈಯಲ್ಲಿ ಅಡಿಗೆಯ ವ್ಯವಸ್ಥೆ ಒಪ್ಪಿಸಿದರು. ಪರಿಸ್ಥಿತಿ ಕ್ರಮೇಣ ಸುಧಾರಿಸಿತು. ರೋಗವು ಹತೋಟಿಯಲ್ಲಿ ಬಂದು ನಿರ್ಮೂಲವಾಯಿತು.

ಜೇಲಿನಲ್ಲಿ ಅಸುನೀಗಿದರು!

ಇಷ್ಟಾಗುವದರೊಳಗಾಗಿ ಅನೇಕ ಕ್ರಿಮಿನಲ್ ಕೈದಿಗಳು ಸತ್ತರಲ್ಲದೆ ರಾಜಬಂದಿಗಳಲ್ಲಿ ಬೆಳಗಾವ ಜಿಲ್ಲೆಯ ಶ್ರೀಮತಿ- ಗಂಗೂಬಾಯಿ ಕಿನಕೆ ನಿಷ್ಪಾಣಿ, ಶ್ರೀಗಳಾದ

ತಾಯಪ್ಪಾ ಹಟ್ಟಿಹೊಳಿ, ವಾಮನರಾವ ಪೋತದಾರ ಅಕ್ಕೋಳ, ಮುನಿನಾಯಿಕ ಶಿವ ನಾಯಿಕ ಪಾಟೀಲ ಮುರಗೋಡ, ಸಿದ್ರಾಮಯ್ಯಾ ಸ್ವಾಮಿ ಹಾಲದೇವರಮಠ ಸಂಕೇ ಶ್ವರ, ಹುಬ್ಬಳ್ಳಿಯ ಯಲ್ಲಪ್ಪಾ ಬ್ಯಾಹಟ್ಟಿ, ನಬೀಸಾಹೇಬ ಕಿತ್ತೂರ, ಕರಾಡದ ವಿಠ್ಠಲ ಜಾಧವ, ಪುಣೆಯ ಶ್ರೀಮತಿ ಸುಶೀಲಾಬಾಯಿ ಬಾಳ ಬೊದಲಾದವರು ಈ ಬೇನೆಗೆ ತುತ್ತಾದರು. ಇದಲ್ಲದೆ ಬೆಳಗಾವಿಯ ಕು. ಅನುಸೂಯಾ ಸಾವಂತ, ಗೋದಾವರಿ ಸೋಲಾಪೂರಕರ, ಶ್ರೀಮತಿ ಲಕ್ಷ್ಮೀಬಾಯಿ ಕುಲಕರ್ಣಿ ಶಹಾಪೂರ, ಸೀತಾಬಾಯಿ ಪ್ರಭು (ಹುಂಚೇನಟ್ಟಿ), ಕು. ಪ್ರಮಿಲಾ ಹರಿಜನ ಹುಬ್ಬಳ್ಳಿ, ಸಿಂಧೂ ಸಖಿ ಮಾಲವಣ, ಪುಣೆಯ ಡಾ. ತಾರಾಬಾಯಿ ಜೋಗಳೇಕರ (ಲಿಮಯೆ) ಹಾಗು ಶಾಂತಾಬಾಯಿ ತಾಮ್ಹಣಕರ ಮೊದಲಾದವರಿಗೆ ಈ ರೋಗದ ಪಿಡುಗು ಬಡೆದು ಬಳಲಿ ಸುದ್ಯೆವದಿಂದ ಬದುಕಿಕೊಂಡರು.

ಚಳುವಳಿಯ ದುರ್ಲಾಭ ಪಡೆದು ಪುಂಡಾಟಿಕೆ ಮಾಡಬಹುದೆಂದು ಕೆಲವೆ ಸಂಶಯಿತ ಸಮಾಜಕಂಟಕರನ್ನು ಬಂಧಿಸಿ ಮೂರನೇ ವರ್ಗದ ಸ್ಥನಬದ್ಧರೆನ್ನಾಗಿ ಮಾಡಿ ಜೇಲಿನಲ್ಲಿ ಇಟ್ಟಿದ್ದರು. ಅವರಲ್ಲಿ ಅಥಣಿ ತಾಲೂಕಿನ ನಾರಾಯಣ ತಂಗಡಿ ಎಂಬವರೂ ಇದ್ದರು. ಅವರಿಗೆ ಈ ಕಾಲರಾದಂಥ ಬೇನೆ ತಗಲಿತು. ಕಿಂಗಕಾಂಗನಂಥ ದೇಹವುಳ್ಳ ಗಡ್ಡಮೀಸೆ ಬೆಳಸಿದ ನಾರಾಯಣ ತಂಗಡಿ ವಾಂತಿಭೇದಿಯಿಂದ ಒದ್ದಾಡಿ ವಿಕಲನಾಗಿ ಅವರ ಸುಶ್ರೂಷೆ ಮಾಡುತ್ತಿದ್ದ ಶ್ರೀ. ಆರ್. ಎಚ್, ಕುಲಕರ್ಣಿಯವರ ಕೈಯಲ್ಲಿ ಕರುಣಾಜನಕ ಅವಸ್ಥೆಯಲ್ಲಿ ಜೀವ ಬಿಟ್ಟನು! ಕರಾಡದ ರಾಜಕೈದಿ ವಿಠ್ಠಲ ಎಂಬವರು ಈ ಭಯಾನಕ ರೋಗದಿಂದ ನಿರ್ವಿಣ್ಣರಾಗಿ ಸಾಯುವ ಪೂರ್ವದಲ್ಲಿ ಶ್ರೀ. ಆರ್. ಎಚ್. ಕುಲಕರ್ಣಿಯವರಿಗೆ ಏನೋ ಹೇಳಬೇಕೆಂದು ತವಕಪಟ್ಟು "ಆಯಿsss" ಎಂದು ಆರ್ತ ಧ್ವನಿಯಿಂದ ಕಿರುಚಿ ಅಸುನೀಗಿದರು ! ಕರುಳು ಕರಗಿಸುವ ಇಂಥ ಕರುಣ ದೃಶ್ಯಗಳನ್ನು ಕಂಡು ಸುಶ್ರೂಷಾವಥಕದ ಸ್ವಯಂಸೇವಕರು ಮಮ್ಮರ ಮರುಗಿದರು !

ಸತ್ತವರ ಶವಗಳನ್ನು ಸ್ಮಶಾನಕ್ಕೆ ಸಾಗಿಸಿ ಶವಸಂಸ್ಕಾರ ಮಾಡುವ ಚರಮ ಸೇವೆಯು ಡಾ. ನಾ. ಸು. ಹರ್ಡೀಕರರ ನೇತೃತ್ವದಲ್ಲಿ ನಡೆಯಿತು. ದಿನಾಲು ಸ್ಮಶಾನ ಯಾತ್ರೆಯಗೂಡ ಕೆಲವು ರಾಜಬಂದಿಗಳು ಸರದಿಯಂತೆ ಹೋಗಬೇಕೆಂದು ಗೊತ್ತಾಯಿತು. ಸಶ್ಮಾನಯಾತ್ರೆಯನ್ನು ನೋಡಲು ಜೇಲ ಹೊರಗಡೆ ನೂರಾರು ಜನರು ದಿನಾಲು ನೆರೆಯುತ್ತಿದ್ದರು. ಅಂತ್ಯಸಂಸ್ಕಾರಕ್ಕಾಗಿ ಅವರು ಸ್ಮಶಾನದವರೆಗೂ ಬರುತ್ತಿದ್ದರು. ಕೆಲವರು ಜೇಲನಲ್ಲಿದ್ದ ತಮ್ಮವರನ್ನು ಭೆಟ್ಟಿ ಆಗಲು ಇದೊಂದು ಸಂಧಿ ಎಂದೂ ಬರುತ್ತಿದ್ದರು. ಯಾವ ದಿನ ಯಾರೂ ಸಾಯುತ್ತಿದ್ದಿಲ್ಲವೊ ಅಂದು ಸ್ಮಶಾನಯಾತ್ರೆ ಹೊರಡುತ್ತಿದ್ದಿಲ್ಲ. ಆಗ ತಮ್ಮವರ ಭೆಟ್ಟಿಗಾಗಿ ಬಂದ ಒಬ್ಬಿಬ್ಬ ಸ್ಟಾರ್ಥಿ ಸ್ತ್ರೀಯರು 'ಸುಡ್ಲಿ, ಇಂದು ಯಾವೂ ಸಾಯಲಿಲ್ಲವಾ' ಎಂದು ಪರ ದುಃಖಶೀತಲ ವೃತ್ತಿ ತೋರಿಸಿದ್ದು ಉಂಟು. ಮನುಷ್ಯನು ಎಷ್ಟು ಅಧೋಗತಿಗಿಳಿಯಬಹುದೆಂಬುದಕ್ಕೆ ಇದು ನಿದರ್ಶನ !

ಕಾಲರಾ ಬೇನೆ ಪ್ರಾರಂಭವಾದಾಗ ಎಲ್ಲ ಕೈದಿಗಳು ಭಯಭೀತರಾದಂತೆ ಒಂದನೇ ವರ್ಗದ ಸ್ಥಾನಬದ್ಧರನ್ನು ಕಾಲರಾ-ಭಯ ಆವರಿಸಿತ್ತು. ಅವರೆಲ್ಲ ಸಂಜೆಯ ಊಟವನ್ನೇ ಬಿಟ್ಟಿದ್ದರು. ಆಪಾನನಿಃಸರಣದ ಸಂದರ್ಭದಲ್ಲಿಯೂ ಕಾಲರಾ ಬಂತೆಂದು ಭಯಾಕುಲರಾಗುತ್ತಿದ್ದರು. ರಾತ್ರಿ ಮಲಗುವಾಗ ಬೆಳತನಕ ಬದಕುವೆವೋ ಇಲ್ಲವೋ ಎಂಬ ಆರ್ದ್ಯೆರ್ಯದಿಂದ ಅರ್ಧನಿದ್ರೆಯಲ್ಲಿಯೇ ಮಲಗುತ್ತಿದ್ದರು. ರಾವ ಬಹಾದ್ದೂರ ಅಂಗಡಿಯವರಂತೂ ರಾತ್ರಿ ತಮಗೆ ಕಾಲರಾ ಆದರೆ ಏನು ಗತಿ ಎಂದು ಒಂದು ಬದಿಗೆ ಶ್ರೀ. ಅಧ್ಯಾಪಕರನ್ನೂ ಇನ್ನೊಂದು ಬದಿಗೆ ಶ್ರೀ. ವೆಂಕರಡಿಯವರನ್ನೂ ಮಲಗಿಸಿಕೊಂಡು ಕೈಗೆ ಕೈಕಟ್ಟಿಕೊಳ್ಳುತ್ತಿದ್ದರು. ಅಪ್ಪಿತಪ್ಪಿ ಆಪಾನನಿಃಸರಣವಾದರೆ ' ಅಧ್ಯಾಪಕರೇ, ಕಾಲರಾ ಬಂತು ! ವೆಂಕರಡಿಯವರೇ ಸತ್ತೆ ಸತ್ತೆ ! ' ಎಂದು ಗಾಬರಿಯಿಂದ ಚೀರುತ್ತಿದ್ದರು.

ಕಾಲರಾ ಬೇನೆ ಕಡಿಮೆ ಆಗಿ ಜೇಲಜೀವನವು ಎಂದಿನ ಸ್ಥಿತಿಗೆ ಬಂದಾಗ ದೇವರ ದಯದಿಂದ ಬದುಕಿದೆವೆಂದು ಎಲ್ಲ ಕೈದಿಗಳು ನಿಟ್ಟುಸಿರು ಬಿಟ್ಟರು. ಅನಂತರ ಜೇಲಿನ ನಿತ್ಯಕ್ರಮಗಳು ಯಥಾಪೂರ್ವ ಸಾಗತೊಡಗಿದವು.

ಶ್ರೀ ಚಿಪಕರ ಡಾಕ್ಟರರ ಫಜೀತಿ

ಶ್ರೀ ಚಿಪಕರ ಸಿವಿಲ್ ಸರ್ಜ್‌ನರು ತಮ್ಮ ಡಾಕ್ಟರೀ ವಿದ್ಯೆಯಲ್ಲಿ ಅನುಭವಿಕರಿದ್ದರು. ಆದರೆ ಹಳೇಪದ್ಧತಿಯ ರಾಜನಿಷ್ಠರಾದ್ದರಿಂದ ಕೈದಿಗಳಕೂಡೆ, ಅದರಲ್ಲಿಯೂ ಮೊದಲು ಮೊದಲು ಚಳವಳಿಯ ರಾಜಕೀಯ ಕೈದಿಗಳಕೂಡ ತಿರಸ್ಕಾರದಿಂದಲೇ ನಡೆಯುತ್ತಿದ್ದರು. ಅಲ್ಲದೆ ರೋಗಿಗಳ ರೋಗ ತಮಗೆ ತಗಲೀತೆಂಬ ಬಯದಿಂದ ಅವರು ಆವರಿಸಿದವರಾಗಿದ್ದರು. ರೋಗಿಯ ಮುಖದ ಕಡೆಗೆ ತಮ್ಮ ಮುಖ ಮಾಡಿ ಎಂದೂ ಪರೀಕ್ಷಿಸುತ್ತಿದ್ದಿಲ್ಲ. ರೋಗಿಯ ಶ್ವಾಸೋಚ್ಛ್ವಾಸ ತಮ್ಮ ಹೊಟ್ಟೆಯಲ್ಲಿ ಸೇರಬಾರದೆಂದು ಅವರು ಇಷ್ಟು ಮುಂಜಾಗ್ರತೆ ವಹಿಸುತ್ತಿದ್ದರು. ರೋಗಿಯ ಜ್ವರ ನೋಡುವಾಗ ಥರ್ಮಾಮೀಟರ ಹಚ್ಚಿದೆ ತಮ್ಮ ಕೈಯೊಳಗಿನ ಬಿಣದ ಬಡಿಗೆಯನ್ನು ಹಚ್ಚುತ್ತಾರೆಂದು ಬಹುಜನ ಕೈದಿಗಳ ತಕರಾರು ಇತ್ತು. ಇವೇ ಮುಂತಾದ ಕಾರಣಗಳ ಹಿನ್ನೆಲೆಯಲ್ಲಿ ಕಾಲರಾ ಸುರು ಆದಾಗ ಅದು ಬೇಗೆ ನಿಯಂತ್ರಣದಲ್ಲಿ ಬರುವಲಕ್ಷಣ ಕಾಣದಾದಾಗ ಒಂದು ದಿನ ಚಿಪಕರರು ಡೆಟಿನ್ಯೂ ಬರಾಕಿಗೆ ಬಂದು ತಿರುಗಿ ಹೋಗುವಾಗ ಶ್ರೀ ದತ್ತೋಪಂತ ಅಧ್ಯಾಪಕರು ಟಣ್ಣನೆ ಜಿಗಿದು ಅವರನ್ನು ಅಡ್ಡಗಟ್ಟಿ ಕೇಳಿದರು- "ಕಾಲರಾದಿಂದ ನಮ್ಮ ಜನ ಸಾಯುಹತ್ತಿದೆ. ನಿಮಗೆ